ಕರ್ನಾಟಕ ಸರ್ಕಾರದ ನಡವಳಿಗಳು

1175
10/05/16

ವಿಷಯ: ಮೆ: ಗಮೇಸ ರಿನ್ಯೂವೇಬಲ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಧಾರವಾಡ ಮತ್ತು ಗದಗ ಜಿಲ್ಲೆಗಳ ನವಲಗುಂದ, ಶಿರಹಟ್ಟಿ ಮತ್ತು ಗದಗ ತಾಲ್ಲೂಕುಗಳ ವಿವಿಧ ಗ್ರಾಮಗಳಲ್ಲಿ 40 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗೆ ಹಂಚಿಕೆ ಆದೇಶ ನೀಡುವ ಬಗ್ಗೆ.

ಓದಲಾಗಿದೆ:

1 ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು ಇವರ ಏಕ ಕಡತ ಸಂಖ್ಯೆ:KRED/08/GRPL-40 MW/NILGUND/GADAG/2016/ G-1313 ದಿನಾಂಕ :25.02.2016.
2 ದಿನಾಂಕ: 27.02.2016 ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿಗಳು.
3 ಮೆ: ಗಮೇಸ ರಿನ್ಯೂವೇಬಲ್ ಪ್ರೈವೇಟ್ ಲಿಮಿಟೆಡ್ ಕಂಪನಿಯವರ ಪತ್ರ ಮನವಿ ದಿನಾಂಕ: 28.03.2016

MD KREDL

* * *

ಪ್ರಸ್ತಾವನೆ :-

GM Mech KREDL

ಮೆ: ಗಮೇಸ ರಿನೀವಬಲ್ ಪ್ರೈವೇಟ್ ಲಿಮಿಟೆಡ್, ಕಂಪನಿಯವರು ಧಾರವಾಡ ಮತ್ತು ಗದಗ ಜಿಲ್ಲೆಗಳ ನವಲಗುಂದ, ಶಿರಹಟ್ಟಿ ಮತ್ತು ಗದಗ ತಾಲ್ಲೂಕುಗಳ ಅನ್ನಿಗೇರಿ, ಸಾಯಿದಾಪುರ, ಅಂತೂರು, ಬೆಂತೂರು, ನಿಲ್‌ಗುಂದ್, ಚಿಂಚಲಿ, ಕಲ್ಲೂರು ಮತ್ತು ಯೆಲ್‌ವಟ್ಟಿ ಗ್ರಾಮಗಳಲ್ಲಿ 40 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆ ಹಂಚಿಕೆ ಕೋರಿ ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ, ಇದನ್ನು ಹಂಚಿಕೆ ಸಮಿತಿ ಸಭೆಯ ಮುಂದೆ ಮಂಡಿಸುವ ಸಲುವಾಗಿ ಯೋಜನೆಗೆ ಸಂಬಂಧಿಸಿದ ತಾಂತ್ರಿಕ ವಿವರಗಳು, ಸ್ಥಳದ ಮಾಹಿತಿ, ಅಕ್ಷಾಂಶ ಮತ್ತು ರೇಖಾಂಶ ಹಾಗೂ ಇನ್ನಿತರೆ ವಿವರಗಳೊಂದಿಗೆ ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್. ರವರು ಮೇಲೆ ಓದಲಾದ ಕ್ರಮ ಸಂಖ್ಯೆ (1) ರನ್ವಯ ಏಕ ಕಡತ ಪದ್ಧತಿಯಡಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಈ ಪ್ರಸ್ತಾನೆಯನ್ನು ಮೇಲೆ ಓದಲಾದ ಕ್ರಮ ಸಂಖ್ಯೆ (2) ರನ್ವಯ ದಿನಾಂಕ :27.02.2016 ರಂದು ನಡೆದ ಹಂಚಿಕೆ ಸಮಿತಿ ಸಭೆಯ ಮುಂದೆ ಮಂಡಿಸಲಾಗಿತ್ತು. ಸಮಿತಿಯ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಸಿ, ಮೆ: ಗಮೇಸ ರಿನೀವಬಲ್ ಪ್ರೈವೇಟ್ ಲಿಮಿಟೆಡ್, ಕಂಪನಿಯವರು ಧಾರವಾಡ ಮತ್ತು ಗದಗ ಜಿಲ್ಲೆಗಳ ನವಲಗುಂದ, ಶಿರಹಟ್ಟಿ ಮತ್ತು ಗದಗ ತಾಲ್ಲೂಕುಗಳ ಅನ್ನಿಗೇರಿ, ಸಾಯಿದಾಪುರ, ಅಂತೂರು, ಬೆಂತೂರು, ನಿಲ್‌ಗುಂದ್, ಚಿಂಚಲಿ, ಕಲ್ಲೂರು ಮತ್ತು ಯೆಲ್‌ವಟ್ಟಿ ಗ್ರಾಮಗಳಲ್ಲಿ ಸ್ಥಾಪಿಸಲು ಉದ್ದೇಶಿಸಿರುವ 40 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗೆ ಎರಡು ವರ್ಷಗಳಲ್ಲಿ ವಾಸ್ತವಿಕ ಸಾಮರ್ಥ್ಯಕ್ಕೆ ವಿಸ್ತೃತ ಯೋಜನಾ ವರದಿಯನ್ನು ತಯಾರಿಸಿ, ಕೆ.ಆರ್.ಇ.ಡಿ.ಎಲ್.ಗೆ ಸಲ್ಲಿಸುವ ಷರತ್ತಿಗೊಳಪಟ್ಟು ತತ್ವಶಃ ಅನುಮೋದನೆ ನೀಡಲು ಸಮಿತಿಯು ಸರ್ವಾನುಮತದಿಂದ ಶಿಫಾರಸ್ಸು ಮಾಡಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರಲ್ಲಿ ಅಭಿವೃದ್ಧಿದಾರರು ಸರ್ಕಾರಕ್ಕೆ ಮನವಿ ಸಲ್ಲಿಸಿ, ತತ್ವಶಃ ಅನುಮೋದನೆ ಪತ್ರ ನೀಡಲು ಅನುಮೋದನೆಗೊಂಡಿರುವ ತಮ್ಮ ಪವನ ವಿದ್ಯುತ್ ಯೋಜನೆಯ ಹಂಚಿಕೆ ಪ್ರಸ್ತಾವನೆಯೊಂದಿಗೆ ತಾವು ಸಲ್ಲಿಸಿರುವ ಡಿಎಫ್‌ಆರ್ ಅನ್ನು ಡಿಪಿಆರ್ ಎಂದು ಪರಿಗಣಿಸಿ, ಸರ್ಕಾರಿ ಆದೇಶವನ್ನು ಹೊರಡಿಸುವಂತೆ ಕೋರಿರುತ್ತಾರೆ. ಇವರ ಕೋರಿಕೆಯ ಬಗ್ಗೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ರವರ ಅಭಿಪ್ರಾಯ ಕೋರಲಾಗಿ, ಅಭಿವೃದ್ಧಿದಾರರ ಕೋರಿಕೆಯಂತೆ ಅವರು ಸಲ್ಲಿಸಿರುವ ಡಿಎಫ್‌ಆರ್ ಅನ್ನು ಡಿಪಿಆರ್ ಎಂದು ಪರಿಗಣಿಸಿ,

--2)

504
12-05-16
ATO
13/05/16

**ಸರ್ಕಾರಿ ಆದೇಶ ಸಂಖ್ಯೆ : ಇಎನ್ 59 ಎನ್‌ಸಿಇ 2016,**
**ಬೆಂಗಳೂರು, ದಿನಾಂಕ : 02.05.2016.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಮೆ: ಗಮೇಸ ರಿನೀವಬಲ್ ಪ್ರೈವೇಟ್ ಲಿಮಿಟೆಡ್, ಕಂಪನಿಯವರಿಗೆ ಧಾರವಾಡ ಮತ್ತು ಗದಗ ಜಿಲ್ಲೆಗಳ ನವಲಗುಂದ, ಶಿರಹಟ್ಟಿ ಮತ್ತು ಗದಗ ತಾಲ್ಲೂಕುಗಳ ಅನ್ನಿಗೇರಿ, ಸಾಯಿದಾಪುರ, ಅಂತೂರು, ಬೆಂತೂರು, ನಿಲ್‌ಗುಂದ್, ಚಿಂಚಲಿ, ಕಲ್ಲೂರು ಮತ್ತು ಯೆಲ್‌ವಟ್ಟಿ ಗ್ರಾಮಗಳಲ್ಲಿ 40 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಈ ಕೆಳಗಿನ ಶೆಡ್ಯೂಲ್‌ನಲ್ಲಿ ವಿವರಿಸಿರುವಂತೆ ಹಾಗೂ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು **ಹಂಚಿಕೆ** ಮಾಡಿ ಆದೇಶಿಸಲಾಗಿದೆ.

Geographical area description for 40 MW capacity wind power project

| Sl. No. | Toposheet No. | Proposed Enhaced capacity in MW | Near by villages of the proposed area and district | Geographical Area Details of the Project |
|---|---|---|---|---|
| 1 | 48 M/7 | 40 MW (20 Nos x 2000 kW) | Annigeri, Saidapur, Antur, Bentur, Nilgund, Kallur, Chinchli and Yelvatti Villages of Navalgund, Shiratti and Gadag Taluks of Dharwad and Gadag Districts. | The identified area has level terrain and which is widely spread between Kondikoppa and Yelvatti villages. It has few high Peaks. The identified area is surrounded by points A, B, C, D, E, F, G, H and are held in the following Geographical co-ordinates as:<br>**Point** A :Lat : 15°15'0" N, Long : 75°27'15.12" E<br>**Point** B :Lat : 15°16'25.68" N, Long : 75°27'14.40" E<br>**Point** C :Lat : 15°16'28.56" N, Long : 75°25'38.64" E<br>**Point** D :Lat : 15°18'53.64" N, Long : 75°25'36.12" E<br>**Point** E :Lat : 15°18'51.84" N, Long : 75°26'54.96" E<br>**Point** F :Lat : 15°25'33.6" N, Long : 75°26'54.24" E<br>**Point** G :Lat : 15°25'36.48" N, Long : 75°30'0" E<br>**Point** H :Lat : 15°15'0" N, Long : 75°30'0" E<br>**peaks:** 631, 625, 635, 641, 643, 645, 646, 652, ( 642, 647, 669, 657 and 637 m Amsl. |
| | Total | 40 MW | | |

**ಷರತ್ತುಗಳು:-**

1. ಈ ಆದೇಶ ಹೊರಡಿಸಿದ ದಿನಾಂಕದಿಂದ 45 ದಿನಗಳ ಒಳಗಾಗಿ ಸರ್ಕಾರಿ ಆದೇಶ ಸಂಖ್ಯೆ ಇಎನ್ 435 ಎನ್‌ಸಿಇ 06.1.2012 ರನ್ವಯ ಅಭಿವೃದ್ಧಿದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದೊಂದಿಗೆ ನಿಯಮಾನುಸಾರ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.
2. ಅಭಿವೃದ್ಧಿದಾರರು ಈ ಯೋಜನೆಯನ್ನು ಸರ್ಕಾರಿ ಆದೇಶ ಸಂಖ್ಯೆ: ಇಎನ್ 354 ಎನ್‌ಸಿಇ 2008 ದಿನಾಂಕ: 19.01.2010 ಹಾಗೂ ತಿದ್ದುಪಡಿ ಆದೇಶ ಸಂಖ್ಯೆ: ಇಎನ್ 07 ಎನ್‌ಸಿಇ 2011 ದಿನಾಂಕ: 18.07.2011 ರಲ್ಲಿ ನಿಗದಿಪಡಿರುವ ಅವಧಿಯೊಳಗಾಗಿ ಅನುಷ್ಠಾನಗೊಳಿಸತಕ್ಕದ್ದು.
3. ಅಭಿವೃದ್ಧಿದಾರರು ತಾಂತ್ರಿಕ ಅವಶ್ಯಕತೆ ಮತ್ತು ಹೆಚ್ಚಿನ ವಿದ್ಯುತ್ ಉತ್ಪಾದನೆಯನ್ನು ಸೇಫ್‌ನಕ್ಷೆ ಮತ್ತು ವಿಂಡ್ ಫಾರ್ಮನ ಲೇಔಟ್‌ನ ಬದಲಾವಣೆಗನುಗುಣವಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ಶಿಫಾರಸ್ಸಿನಂತೆ ಇದೆ ಎಂಬುದನ್ನು ಖಾತರಿ ಪಡಿಸಬೇಕು.

--3)